# ಸಲಹಾ ಸಮಿತಿ ಸಭೆ ಬಹಿಷ್ಕಾರ; ಸಿಎಂ ಸಂಧಾನ ವಿಫಲ

## ಸಭೆಗೆ ಬರುವುದಿಲ್ಲವೆಂದು ಪಟ್ಟುಹಿಡಿದಿರುವ ಕಾಂಗ್ರೆಸ್ | ಮಾಹಿತಿಯಿಲ್ಲದೇ, ಗೋಹತ್ಯೆ ನಿಷೇಧ ಮಂಡಿಸಿದ್ದಕ್ಕೆ ಆಕ್ಷೇಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರತಿಪಕ್ಷಗಳ ಗಮನಕ್ಕೆ ತಾರದೇ ಕಾರ್ಯಕಲಾಪವನ್ನು ಸರಕಾರ ನಿರ್ಧರಿಸುತ್ತದೆ ಎಂದು ಆರೋಪಿಸಿ ಸದನ ಸಲಹಾ ಸಮಿತಿಯನ್ನು ಬಹಿಷ್ಕರಿಸಿರುವ ಕಾಂಗ್ರೆಸ್, ತನ್ನ ಪಟ್ಟನ್ನು ಮುಂದುವರಿಸಿದೆ.

ಸದನ ಸಲಹಾ ಸಮಿತಿಯಲ್ಲಿ ಭಾಗವಹಿಸುವುದಿಲ್ಲವೆಂದು ಬಹಿಷ್ಕರಿಸಿದ್ದ ಕಾಂಗ್ರೆಸ್ ನಾಯಕರ ಮನವೊಲಿಸಲು ಸಿಎಂ ಯಡಿಯೂರಪ್ಪ ಅವರು ಕಸರತ್ತು ನಡೆಸಿದರು. ಆದರೆ, ಇದಕ್ಕೆ ಕೈ ನಾಯಕರು ಬಗ್ಗಿಲ್ಲ.

**ಸಿದ್ದರಾಮಯ್ಯರೊಂದಿಗೆ ಮಾತುಕತೆ:** ಸಭೆಗೆ ಪ್ರತಿಪಕ್ಷಗಳ ಸದಸ್ಯರು ಭಾಗವಹಿಸಬೇಕೆಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಶುಕ್ರವಾರ ನಡೆಸಿದ ಸಂಧಾನ ಸಭೆ ಮತ್ತೆ ವಿಫಲವಾಗಿದೆ. ಬೆಳಗ್ಗೆ ಕಲಾಪ ಆರಂಭಕ್ಕೂ ಮುನ್ನ ಯಡಿಯೂರಪ್ಪನವರು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯರೊಂದಿಗೆ ಮಾತುಕತೆ ನಡೆಸಿದರು. ಏನೇ ಸಮಸ್ಯೆಗಳಿದ್ದರೂ ಮಾತುಕತೆ ಮೂಲಕ ಇಲ್ಲವೇ ಚರ್ಚೆಯ ಮೂಲಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳೋಣ, ಸದನ ಸಲಹಾ ಸಮಿತಿ ಕಲಾಪ ಬಹಿಷ್ಕರಿಸುವ ನಿಮ್ಮ ತೀರ್ಮಾನವನ್ನು ಹಿಂತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು.

### ಸೋಮವಾರ ಸಭೆ

ಮುಖ್ಯಮಂತ್ರಿ ಯಡಿಯೂರಪ್ಪ, ವಿಧಾನಸಭಾ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ಹಿರಿಯ ನಾಯಕರು ಸುಮಾರು 50 ನಿಮಿಷಕ್ಕೂ ಹೆಚ್ಚು ಕಾಲ ಸಂಧಾನ ಮಾಡಲು ಪ್ರಯತ್ನಿಸಿದರು. ಆದರೆ, ಅದು ಸಾಧ್ಯವಾಗದೇ ಇದ್ದಿದ್ದರಿಂದ ಸದನ ಸಲಹಾ ಸಮಿತಿ ಸಭೆಯನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಪ್ರತಿಪಕ್ಷಗಳು ಭಾಗವಹಿಸದೇ ಬಿಎಸ್‌ಸಿ ಸಭೆ ನಡೆಸುವುದು ಅಷ್ಟು ಸಮಂಜಸವಲ್ಲ. ನಿಮ್ಮ ತೀರ್ಮಾನವನ್ನು ಮತ್ತೊಮ್ಮೆ ಪರಿಶೀಲಿಸಿ. ಸರಕಾರಕ್ಕೆ ಅಗತ್ಯವಾಗಿರುವ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಮಾಡಬೇಕೆಂದು ಕೋರಿದರು. ಸಭೆಯಲ್ಲಿ ಕೆಲವು ಬದಲಾವಣೆ ಮಾಡುವ ಸಂದರ್ಭದಲ್ಲಿ ಪ್ರತಿಪಕ್ಷಗಳ ಸದಸ್ಯರ ಸಲಹೆ ಅಗತ್ಯವಾಗಿರುತ್ತದೆ. ಹಿಂದೆ ಪ್ರತಿಪಕ್ಷಗಳು ಈ ರೀತಿ ಬಹಿಷ್ಕಾರ ಮಾಡಿದ ನಿದರ್ಶನಗಳಿಲ್ಲ. ಏನೇ ಸಮಸ್ಯೆ ಅಥವಾ ಅಸಮಾಧಾನವಿದ್ದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣ. ನೀವು ಬಿಎಸ್‌ಸಿಯನ್ನು ಬಹಿಷ್ಕರಿಸುವುದು ಸರಿಯಲ್ಲ ಎಂದರು.

**ಪ್ರತಿಪಕ್ಷದ ಪಾತ್ರದ ಅರಿವಿದೆ:** ಯಡಿಯೂರಪ್ಪ ಅವರ ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯನವರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಪಕ್ಷಗಳ ಪಾತ್ರ ಏನೆಂಬುದು ನನಗೂ ಗೊತ್ತಿದೆ. ನಾವು ಸುಖಾಸುಮ್ಮನೆ ಸದನ ಸಲಹಾ ಸಮಿತಿ ಸಭೆಗೆ ಬಹಿಷ್ಕಾರ ಮಾಡುವ ತೀರ್ಮಾನಕ್ಕೆ ಬಂದಿಲ್ಲ. ನೀವು ಕಾರ್ಯಕಲಾಪ ಪಟ್ಟಿಯಲ್ಲಿ ಇಲ್ಲದ ಕಾಯಿದೆಗಳನ್ನು ಸೇರ್ಪಡೆ ಮಾಡಬೇಕಾದರೆ ನಮ್ಮ ಜತೆ ಚರ್ಚಿಸಬೇಕು. ಏಕಾಏಕಿ ತೀರ್ಮಾನಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಕಳೆದ ಅಧಿವೇಶನದ ಸಂದರ್ಭದಲ್ಲಿ ನೀವು ಕರ್ನಾಟಕ ಗೋಹತ್ಯೆ ಮಸೂದೆ ಕಾಯಿದೆಯನ್ನು ಮಂಡಿಸುವ ಬಗ್ಗೆ ನಮಗೆ ಮಾಹಿತಿಯನ್ನೇ ನೀಡಿರಲಿಲ್ಲ. ಕಡೆ ಪಕ್ಷ ಈ ಮಸೂದೆಯನ್ನು ಮಂಡನೆ ಮಾಡುವ ಬಗ್ಗೆ ಸಣ್ಣ ಸುಳಿವನ್ನೂ ಕೊಟ್ಟಿರಲಿಲ್ಲ. ಪ್ರತಿಪಕ್ಷಗಳೊಂದಿಗೆ ಚರ್ಚಿಸದೇ ಮಸೂದೆಗಳನ್ನು ಮಂಡಿಸುವುದು ಸರಿಯೇ ಎಂದಿದ್ದಾರೆ.

ನಾವು ಈಗಾಗಲೇ ತೀರ್ಮಾನ ಮಾಡಿರುವಂತೆ ಯಾವುದೇ ಸದನ ಸಲಹಾ ಸಮಿತಿ ಸಭೆಗೆ ಭಾಗವಹಿಸುವುದಿಲ್ಲ. ನಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಹೀಗೆ ಪ್ರತಿಪಕ್ಷಗಳ ಸದಸ್ಯರ ಮನವೊಲಿಸುವ ಮುಖ್ಯಮಂತ್ರಿಗಳ ಸಂಧಾನ ವಿಫಲವಾಗಿದೆ ಎಂದು ತಿಳಿದುಬಂದಿದೆ.

# ನಿಯಮ 69ರಲ್ಲಿ ಚರ್ಚೆ

**ಬೆಂಗಳೂರು:** ಕಳೆದ ವಾರ ಶಿವಮೊಗ್ಗದ ಹುಣಸೋಡು ಭಾಗದಲ್ಲಿ ಅಕ್ರಮ ಕಲ್ಲಿನ ಕ್ವಾರಿ ಸ್ಫೋಟಿಸಲು ತಂದಿದ್ದ ಜಿಲೆಟಿನ್ ಕಡ್ಡಿ ಸ್ಫೋಟದ ಬಗ್ಗೆ ಸೋಮವಾರ ನಿಯಮ 69ರಲ್ಲಿ ಚರ್ಚೆಗೆ ಅವಕಾಶ ನೀಡುವುದಕ್ಕೆ ಸ್ಪೀಕರ್ ಕಾಗೇರಿ ಅವರು ಒಪ್ಪಿದ್ದಾರೆ. ಸಿದ್ದರಾಮಯ್ಯ ಅವರು ಈ ವಿಷಯವನ್ನು ನಿಯಮ 60ರಡಿ ಪ್ರಸ್ತಾಪಿಸಲು ಮುಂದಾದರು. ಆದರೆ, ಇದನ್ನು 69ರಲ್ಲಿ ನೀಡುವುದಾಗಿ ಭರವಸೆ ನೀಡಿದ್ದರಿಂದ ಅದಕ್ಕೆ ಸಮ್ಮತಿಸಿದ್ದಾರೆ. ಪ್ರಸ್ತಾವನೆ ಸೋಮವಾರ ಬೆಳಗ್ಗೆ ಪೂರ್ಣಗೊಂಡರೆ, ಸಂಜೆ ವೇಳೆಗೆ ಉತ್ತರ ನೀಡುವ ಭರವಸೆಯನ್ನು ಸರಕಾರದ ಪರವಾಗಿ ಬಸವರಾಜ ಬೊಮ್ಮಾಯಿ ನೀಡಿದ್ದಾರೆ.

# ಲಿಖಿತ ಉತ್ತರದಲ್ಲಿ ಸಮಸ್ಯೆ

**ಬೆಂಗಳೂರು:** ವಿಧಾನಸಭೆಯಲ್ಲಿ ಚುಕ್ಕಿ ಗುರುತಿಲ್ಲದೇ ಪ್ರಶ್ನೆಗಳನ್ನು ಸಮರ್ಪಕವಾಗಿ ಸರಕಾರ ನೀಡುತ್ತಿಲ್ಲ ಎಂದು ಪ್ರತಿಪಕ್ಷ ಸದಸ್ಯರು ಆರೋಪಿಸಿದರು. ಶುಕ್ರವಾರದ ಕಲಾಪದಲ್ಲಿ, ಈ ಬಗ್ಗೆ ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರು, ಸಮರ್ಪಕ ಉತ್ತರ ನೀಡುವುದಿಲ್ಲ, ನೀಡಿದರೂ, ತಪ್ಪು ಮಾಹಿತಿ ನೀಡಲಾಗಿರುತ್ತದೆ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಕಾಗೇರಿ ಅವರು, ಇನ್ನು ಮುಂದೆ ಹೀಗಾಗದಂತೆ ಎಚ್ಚರವಹಿಸುವಂತೆ ಸರಕಾರಕ್ಕೆ ತಾಕೀತು ಮಾಡಿದರು. ಇನ್ನು ಶುಕ್ರವಾರ 135 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ ಕೇವಲ 42ಕ್ಕೆ ಉತ್ತರ ನೀಡಿರುವುದು ಪ್ರತಿಪಕ್ಷಗಳ ಆರೋಪಕ್ಕೆ ಕಾರಣವಾಯಿತು.